[ **Govt. of Karnataka** **C.R.P. 67]**

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 1707/2022**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 4

ಸಾಕ್ಷಿದಾರನ ಹೆಸರು : ಸುರೇಶ್ ಶೆಟ್ಟಿ
ತಂದೆಯ ಹೆಸರು : ಸುಬ್ಬಯ್ಯ ಶೆಟ್ಟಿ
ಪ್ರಾಯ : 52 ವರ್ಷ
ಉದ್ಯೋಗ : ಕೃಷಿ
ವಾಸ : ಶಿವಪುರ

ದಿನಾಂಕ 21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಆರೋಪಿತರನ್ನು ನಾನು ನೋಡಿರುವುದಿಲ್ಲ.

ಸುಮಾರು 3 ವರ್ಷಗಳ ಹಿಂದೆ ಪೊಲೀಸರು ಶಿವಪುರ ಗ್ರಾಮದ ಬ್ಯಾಣ ಎಂಬಲ್ಲಿ ಬರಲು ಹೇಳಿರುತ್ತಾರೆ. ಸದ್ರಿ ಸ್ಥಳದಲ್ಲಿ ಒಂದು ಪಿಕಪ್ ವಾಹನ ಹಾಗೂ ಜಾನುವಾರುಗಳು ಇದ್ದವು. ಆದರೆ ಎಷ್ಟು ಜಾನುವಾರುಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದ್ರಿ ಸಮಯ ಪೋಲೀಸರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸದ್ರಿ ಸ್ಥಳದಲ್ಲಿ ವಾಹನವು ಅಪಘಾತವಾದ ಬಗ್ಗೆ ಪ್ರಕರಣ ದಾಖಲಾಗಿದ್ದು ಅದರ ಸಲುವಾಗಿ ಒಂದು ದಾಖಲೆಗೆ ಸಹಿ ಹಾಕಲು ಕೋರಿಕೊಂಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿಯು ಘಟನಾ ಸ್ಥಳ ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಾನುವಾರುಗಳ ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಯು ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ. ಈ ಬಗ್ಗೆ

ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-

ದಿ:13.04.2022 ರಂದು ನಿಮ್ಮನ್ನು ಹೆಬ್ರಿ ಠಾಣಾ ಉಪನೀರಿಕ್ಷಕರು ಶಿವಪುರ ಗ್ರಾಮದ ಬ್ಯಾಣ ಎಂಬಲ್ಲಿಗೆ ಬರುವಂತೆ ತಿಳಿಸಿದ್ದು ಅದರಂತೆ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸಾಕ್ಷಿಯು ನಾನು ಹೋಗುತ್ತಿರುವಾಗ ಪೊಲೀಸರು ನನ್ನನ್ನು ನಿಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಆ ಸಮಯದಲ್ಲಿ ನನ್ನ ಪರಿಚಯದ ಚಾಸಾ-5 ರವರು ಸಹ ಇದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಘಟನೆಯ ವಿದ್ಯಮಾನದ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನೀವು ನಿಮ್ಮ ಕೈಯಲ್ಲಿದ್ದ ಟಾರ್ಚ್ ಲೈಟ್ ನಿಂದ ಪರಿಶೀಲಿಸಿದಾಗ ಚಾಸಾ-6 ರವರ ಅಂಗಡಿಯ ಮುಂಭಾಗ ನೊಂದಣಿ ಫಲಕ ಇಲ್ಲದ ವಾಹನ ನಿಂತಿತ್ತು ಎಂದರೆ ಸರಿಯಲ್ಲ. ಆ ವಾಹನದ ಮುಂದಿನ ಗಾಜು ಜಖಂ ಆಗಿತ್ತು ಎಂದರೆ ಸರಿಯಲ್ಲ. ಹಾಗೂ ಅಂಗಡಿಯ ಮುಂಭಾಗ ಹಾಕಿದ್ದ ಸಿಮೆಂಟ್ ಶೀಟ್ ಜಖಂ ಆಗಿತ್ತು ಎಂದರೆ ಸರಿಯಲ್ಲ. ಆ ವಾಹನದ ಹಿಂಬದಿಗೆ ಟಾರ್ಪಲ್ ನಿಂದ ಮುಚ್ಚಿತ್ತು ಎಂದರೆ ಸರಿ. ಸದ್ರಿ ಟಾರ್ಪಲ್ ನ್ನು ತೆಗೆದು ನೋಡಿದಾಗ ಜಾನುವಾರುಗಳನ್ನು ಯದ್ವತದ್ವವಾಗಿ ಒಂದರ ಮೇಲೊಂದರಂತೆ ತುಂಬಿಸಿ ಅವುಗಳ ಕುತ್ತಿಗೆ ಮತ್ತು ಕಾಲುಗಳಿಗೆ ಹುರಿಹಗ್ಗದಿಂದ ಕಟ್ಟಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಸದ್ರಿ ವಾಹನದಲ್ಲಿ 14 ಜಾನುವಾರುಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಜಾನುವಾರುಗಳಲ್ಲಿ ಒಂದು ಜಾನುವಾರು ಸತ್ತು

ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾಹನದ ಚಾಲಕ ಸೀಟಿನ ಕೆಳಗೆ ಆಯುಧಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕ್ಯಾಬಿನಲ್ಲಿ ಒಂದು ಕಪ್ಪು ಬಣ್ಣದ ಮೊಬೈಲ್ ಇತ್ತು ಎಂದರೆ ನನಗೆ ಗೊತ್ತಿಲ್ಲ.

ಸದ್ರಿ ವಾಹನದಲ್ಲಿ 4 ಜನ ವ್ಯಕ್ತಿಗಳು ಇದ್ದು ಅವರುಗಳು ಜಾನುವಾರುಗಳನ್ನು ಯದ್ವತದ್ವವಾಗಿ ಒಂದರ ಮೇಲೊಂದರಂತೆ ತುಂಬಿಸಿ ಅವುಗಳ ಕುತ್ತಿಗೆ ಮತ್ತು ಕಾಲುಗಳಿಗೆ ಹುರಿಹಗ್ಗದಿಂದ ಕಟ್ಟಿ ಅವುಗಳನ್ನು ವಧೆ ಮಾಡುವ ಉದ್ದೇಶದಿಂದ ಕಾಸಾಯಿಖಾನೆಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ಪೊಲೀಸರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ನಿಪಿ-2 ರಂತೆ ಮಹಜರು ಮಾಡಿ, ಹಳದಿ ಮೆರುನ್ ಬಣ್ಣದ ಟಾಟಾ ಕಂಪನಿಯ ಪಿಕಪ್ ವಾಹನ ಮತ್ತು ಅದರಲ್ಲಿರುವ 14 ಜಾನುವಾರು ಹಾಗೂ ಜಾನುವಾರುಗಳನ್ನು ಕಟ್ಟಲು ಉಪಯೋಗಿಸಿದ 20 ಹುರಿಹಗ್ಗ, 25 ಇಂಚು ಮರದ ಹಿಡಿ ಇರುವ ಉದ್ದನೆಯ ಕಬ್ಬಿಣದ ಮೊಂಡು ಕತ್ತಿ-1, ಸುಮಾರು 26 ಇಂಚು ಉದ್ದ ಇರುವ ಕಬ್ಬಿಣದ ಹಿಡಿ ಇರುವ ಹಳೆಯ ತೆಳ್ಳಗಿನ ತಲವಾರು ಒಂದು, ಕಪ್ಪು ಬಣ್ಣ ನೋಕಿಯಾ ಕಂಪನಿಯ ಮೊಬೈಲ್ ಗಳನ್ನು ನೀವು ಹಾಗೂ ಚಾಸಾ-5 ರವರ ಸಮಕ್ಷಮ ಪೊಲೀಸರು ಸ್ವಾಧೀನಪಡಿಸಿಕೊಂಡು ತಮ್ಮಸಹಿಯನ್ನು ಸ್ಥಳದಲ್ಲಿಯೇ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 14.04.2022 ರಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-25 ಎಂದು ಗುರುತಿಸಲಾಯಿತು.

ದಿಃ16.05.2022 ರಂದು ನಿಮ್ಮನ್ನು ಮತ್ತು ಚಾಸಾ-5 ರವರನ್ನು ಪೊಲೀಸರು ಠಾಣೆಗೆ ಕರೆದು ಪೊಲೀಸರ ವಶದಲ್ಲಿದ್ದ 1 ರಿಂದ 3 ನೇ ಆರೋಪಿಗಳನ್ನು ತೋರಿಸಿ ಇವರೇ 13.04.2022 ರಂದು ಮುಂಜಾನೆ ಸಮಯ ನಾಡ್ಪಲ್ ಗ್ರಾಮದ ಸೋಮೇಶ್ವರದ ಗುಲ್ಲಿ

ಎಂಬಲ್ಲಿ ರಸ್ತೆಯ ಬದಿ ಮಲಗಿದ್ದ 6 ಜಾನುವಾರಗಳನ್ನು , ಅಂಗಡಿಬೆಟ್ಟು ಬಸ್ಸು ನಿಲ್ದಾಣದ ರಸ್ತೆ ಬದಿಯಲ್ಲಿಮಲಗಿದ್ದ 4 ಜಾನುವಾರುಗಳನ್ನು ಹಾಗೂ ಬೆಳಂಜೆ ತೆಂಕೊಳ ಎಂಬಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ 4 ಜಾನುವಾರುಗಳನ್ನು ಕಳುವು ಮಾಡಿ ಅವುಗಳನ್ನು ಕಸಾಯಿಖಾನೆಗೆ ತೆಗೆದುಕೊಂಡು ಹೋಗುತ್ತಿದ್ದವರು ಹಾಗೂ ನಮ್ಮನ್ನು ನೋಡಿ ಓಡಿ ಹೋದ ಅಪಾದಿತರು ಇವರೇ ಆಗಿರುತ್ತಾರೆ ಹಾಗೂ ಇವರೊಂದಿಗೆ 4 ಮತ್ತು 5 ನೇ ಆರೋಪಿತರು ಇದ್ದರು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ16.05.2022 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-26 ಎಂದು ಗುರುತಿಸಲಾಯಿತು.

ದಿಃ13.08.2022 ರಂದು ಚಾಸಾ-1 ರವರು ನನ್ನನ್ನು ಮತ್ತು ಚಾಸಾ-5 ರವರನ್ನು ಪೊಲೀಸರು ಠಾಣೆಗೆ ಕರೆದು ಪೊಲೀಸರ ವಶದಲ್ಲಿದ್ದ 4 ಮತ್ತು 5 ನೇ ಆರೋಪಿಗಳನ್ನು ತೋರಿಸಿ ಇವರೇ 13.04.2022 ರಂದು ಮಂಜಾನೆ ಸಮಯ ನಾಡ್ವಲ್ ಗ್ರಾಮದ ಸೋಮೇಶ್ವರದ ಗುಲ್ಲಿ ಎಂಬಲ್ಲಿ ರಸ್ತೆಯ ಬದಿ ಮಲಗಿದ್ದ 6 ಜಾನುವಾರಗಳನ್ನು , ಅಂಗಡಿಬೆಟ್ಟು ಬಸ್ಸು ನಿಲ್ದಾಣದ ರಸ್ತೆ ಬದಿಯಲ್ಲಿಮಲಗಿದ್ದ 4 ಜಾನುವಾರುಗಳನ್ನು ಹಾಗೂ ಬೆಳಂಜೆ ತೆಂಕೊಳ ಎಂಬಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ 4 ಜಾನುವಾರುಗಳನ್ನು ಕಳುವು ಮಾಡಿ ಅವುಗಳನ್ನು ಕಸಾಯಿಖಾನೆಗೆ ತೆಗೆದುಕೊಂಡು ಹೋಗುತ್ತಿದ್ದವರು ಹಾಗೂ ನಮ್ಮನ್ನು ನೋಡಿ ಓಡಿ ಹೋದ 1 ರಿಂದ 3 ನೇ ಆರೋಪಿತರೊಂದಿಗೆ ಇವರು ಸಹ ಇದ್ದರು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ13.08.2022 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-27 ಎಂದು

ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದ ::

ನಾನು ನಿಪಿ-2 ಕ್ಕೆ ಯಾವ ಸಮಯದಲ್ಲಿ ಸಹಿ ಹಾಕಿದ್ದೇನೆ ಎಂದು ಗೊತ್ತಿಲ್ಲ. ನಾನು ನನ್ನ ಕೆಲಸದ ನಿಮಿತ್ತ ಶಿವಪುರದಿಂದ ಹೆಬ್ರಿಗೆ ಹೋಗುತ್ತಿರುವಾಗ ಪೊಲೀಸರು ನಿಲ್ಲಿಸಿ ಸಹಿ ಪಡೆದುಕೊಂಡಿರುತ್ತಾರೆ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ